**ಓ.ಎಸ್. ನಂಃ 94/2023**

**ಪಿ.ಡಬ್ಲ್ಯೂಃ 1**

**ದಿನಾಂಕ 04.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಟಿ.ಜಿ. ವಕೀಲರಿಂದಃ**

12. ನಿಪಿ.12 ಮತ್ತು 13 ರ ದಾಖಲೆಗಳಲ್ಲಿ ದಾವಾ ಆಸ್ತಿಯ ಚೆಕ್ಕುಬಂಧಿ ನಮೂದಾಗಿರುವುದಿಲ್ಲ. ನಿಪಿ.17 ರ ದಾಖಲೆಯನ್ನು ನಾನು ಯಾವಾಗ ತಯಾರಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಿಪಿ.17 ರ ದಾಖಲೆಯನ್ನು ತಯಾರಿಸಿದ ದಿನಾಂಕ ನಿಪಿ.17 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ.16 ರ ನೋಟಿಸು ನೀಡಿದ ನಂತರದಲ್ಲಿ ನಿಪಿ.17 ರ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ.17 ರ ನಕಾಶೆ ತಯಾರಿಸುವಾಗ ನಡೆಸಿದ ಮಹಜರ್ ಪ್ರಕ್ರಿಯೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

13. ನಿಪಿ.17 ರ ನಕಾಶೆಯ ಸಂಬಂಧ ಡಿ.ಡಿ.ಎಲ್.ಆರ್ ರವರ ಪ್ರಕರಣ ಸಂಖ್ಯೆ 61/19-20 ರಂತೆ ಪ್ರಕರಣ ನಡೆದಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಿಪಿ.17 ರ ನಕಾಶೆಯನ್ನು ರದ್ದುಪಡಿಸಿ ಹೊಸ ಪೋಡು ಮಾಡುವಂತೆ ದಿನಾಂಕ 24.08.2020 ರಲ್ಲಿ ಡಿ.ಡಿ.ಎಲ್.ಆರ್ ರವರು ಆದೇಶಿಸಿರುತ್ತಾರೆ ಎಂದರೆ ಸರಿ. ಡಿ.ಡಿ.ಎಲ್.ಆರ್ ರವರು ಹೊರಡಿಸಿದ ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಡಿ.ಡಿ.ಎಲ್.ಆರ್ ರವರು ಹೊರಡಿಸಿದ ಸದರಿ ಆದೇಶದ ನಂತರ ಯಾವುದೇ ಹೊಸ ಸರ್ವೇ ಕಾರ್ಯ ಮತ್ತು ಪೋಡು ಆಗಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**